ರಾಜ್ಯದಲ್ಲಿ ಮಣ್ಣು ಪರೀಕ್ಷಾ ಕೇಂದ್ರಗಳು

1687 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಮಣ್ಣು ಪರೀಕ್ಷಾ ಕೇಂದ್ರಗಳು ಎಷ್ಟಿವೆ. ವರ್ಷಕ್ಕೆ ಇದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗುತ್ತಿದೆ. ಇದುವರೆವಿಗೂ ಮಣ್ಣು ಪರೀಕ್ಷೆಯನ್ನು ಎಷ್ಟು ಜನ ರೈತರಿಗೆ ಯಾವ ಯಾವ ಅಂಶಗಳು ಕಡಿಮೆ ಅನ್ನುವ ಮಾಹಿತಿಯ ಗುರುತಿನ ಚೀಟಿ ನೀಡಲಾಗಿದೆ.*

ಆ) *ಈ ಮಣ್ಣು ಪರೀಕ್ಷಾ ಕೇಂದ್ರದಲ್ಲಿ ನಡೆದ ಹಣದ ಭ್ರಷ್ಟಾಚಾರದ ಬಗ್ಗೆ ಇದುವರೆವಿಗೆ ತೆಗೆದುಕೊಂಡ ಕ್ರಮಗಳೇನು?*

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ 19 ಸ್ಥಾನಿಕ ಮಣ್ಣು ಆರೋಗ್ಯ ಕೇಂದ್ರಗಳು ಮತ್ತು ಸಂಚಾರಿ ಮಣ್ಣು ಆರೋಗ್ಯ ಕೇಂದ್ರಗಳು ಇರುತ್ತವೆ. ವರ್ಷಕ್ಕೆ ಸಿಬ್ಬಂದಿ ವೇತನ ಮತ್ತು ಇತರೆ ಭತ್ಯೆ ಸೇರಿ ಒಟ್ಟು 197.9 ಲಕ್ಷ ರೂಗಳನ್ನು ಖರ್ಚು ಮಾಡಲಾಗುತ್ತದೆ.

ಭೂಗುಣ ಯೋಜನೆಯಲ್ಲಿ ಮಾರ್ಚಿ 98ರ ಅಂತ್ಯಕ್ಕೆ ಮಣ್ಣು ಪರೀಕ್ಷೆ ಮಾಡಿ ಯಾವ ಯಾವ ಅಂಶಗಳು ಹೆಚ್ಚು : ಕಡಿಮೆ ಅನ್ನುವ ಮಾಹಿತಿಯನ್ನೊಳಗೊಂಡ ಭೂಪಲವತ್ತತೆ ಚೀಟಿಯನ್ನು 44.47ಲಕ್ಷ ರೈತರಿಗೆ ನೀಡಲಾಗಿದೆ.

ಆ) ನಂಜನಗೂಡು (ಮೈಸೂರು ಜಿಲ್ಲೆ) ಮಣ್ಣು ಆರೋಗ್ಯ ಕೇಂದ್ರದಲ್ಲಿ 7923-35 ರೂಗಳ ದುರುಪಯೋಗದ ಮೇಲೆ ಅಲ್ಲಿನ ಕೃಷಿ ಅಧಿಕಾರಿ ಆಗಿದ್ದ ಶ್ರೀ ಎಂ.ಕೆ.ನಾರಾಯಣರವರನ್ನು ನಿಯಮಾವಳಿ 285 ರಲ್ಲಿ ಕಡ್ಡಾಯ ನಿವೃತ್ತಿ ಮಾಡಲಾಗಿದೆ ಹಾಗೂ ಶ್ರೀ ಕೆ.ಜಿ.ಪುಟ್ಟಸುಬ್ಬಪ್ಪ ಪ್ರಯೋಗಶಾಲಾ ಸಹಾಯಕರನ್ನು ಸೇವೆಯಿಂದ ವಜಾ ಮಾಡಲಾಗಿದೆ. ಇತರೆ ಮಣ್ಣು ಆರೋಗ್ಯ ಕೇಂದ್ರಗಳಲ್ಲಿ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲ.

ರಾಜ್ಯ ಬೀಜ ನಿಗಮ ಮತ್ತು ಕೇಂದ್ರ ಬೀಜ ನಿಗಮಗಳು.

1688- ಕೆ.ಎನ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯ ಬೀಜ ನಿಗಮ ಮತ್ತು ಕೇಂದ್ರ ಬೀಜ ನಿಗಮಗಳಿಂದ ಒಟ್ಟು ಎಷ್ಟು ಟನ್ ಬೀಜಗಳನ್ನು ಪ್ರತಿ ವರ್ಷ ರೈತರಿಗೆ ಸರಬರಾಜು ಮಾಡಲಾಗುತ್ತಿದೆ.*

ಆ) *ರಾಜ್ಯಕ್ಕೆ ವಾರ್ಷಿಕ ಎಷ್ಟು ಟನ್ ಬಿತ್ತನೆ ಬೀಜ ಬೇಕಾಗಿರುತ್ತದೆ. ಇದರಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಹಾಗೂ ಖಾಸಗಿಯವರ ಪಾಲೆಷ್ಟು?*